ಶ್ರೀ ಎಸ್.ಎಸ್. ಪಾಟೀಲ್ : ನಮ್ಮ ನಿಲುವು ಆದೇ, ನಬಾರ್ಡ್ ನವರು ಒಪ್ಪಿದರೆ ಖಂಡಿತವಾಗಿ ನಾವು ಕೊಡುತ್ತೇವೆ.

ಒಪ್ಪಿ ಮಾನ್ಯ ಸದಸ್ಯರು : ಅವರು ಒಪ್ಪಿಲ್ಲ ಎಂದರೆ ತಾವು ಒಪ್ಪಿಸಬೇಕಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ರಾಮಕೃಷ್ಣ ಅವರುಗಳು ಹೇಳಿದ್ದನ್ನೆಲ್ಲಾ ಆಗಲೇ ಪ್ರಸ್ತಾಪ ಮಾಡಿದ್ದೇನೆ. ಇದರೊಳಗೆ ಹೊಸದಾಗಿ ಯಾವುದೂ ಇಲ್ಲ. ಆದರೂ ಇದಕ್ಕೆ ತಕ್ಕ ಉತ್ತರವನ್ನು ತಕ್ಕ ವ್ಯವಸ್ಥೆಯನ್ನು ಮಾಡಿಸುತ್ತೇನೆ. ನಾವು ಮೀಟರ ಅಳವಡಿಸಿದರೂ ಹೆಚ್.ಪಿ ಆಧಾರದ ಮೇಲೆ ಹಾಕುತ್ತೇವೆ. ಮೀಟರ್ ಅಳವಡಿಸುವುದು ಎಷ್ಟು ವಿದ್ಯುತ್ತನ್ನು ನಾವು ಬಳಸುತ್ತೇವೆ ಎಂದು ತಿಳಿದುಕೊಳ್ಳುವುದಕ್ಕೆ.

ಅಧ್ಯಕ್ಷರು : ಪ್ರಶ್ನೆ ಏನೆಂದರೆ

"ಫೆಬ್ರುವರಿ 11, 1997ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ"

"ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು"

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ ನಾವು ಹೇಳಿದಂತಹ ಯಾವುದೇ ರೈತರ ಸಮಸ್ಯೆಗೆ ಉತ್ತರ ಕೊಡಲಿಲ್ಲ. ರೈತ ವಿರೋಧಿ ಸರ್ಕಾರಕ್ಕೆ ಪ್ರತಿಭಟನೆ ಮಾಡಿ ನಾವು ಈ ಸದನದಿಂದ ಹೊರಗೆ ಹೋಗುತ್ತಿದ್ದೇವೆ. ಕರೆಂಟ್ ಇಲ್ಲ ಮೀಟರ್ ಹಾಕಬೇಡಿ ಎಂದರೆ ಮೀಟರ್ ಹಾಕುತ್ತಾರೆ.

(ಮಾನ್ಯ ಬಿಜೆಪಿ ಸದಸ್ಯರುಗಳು ಮಾನ್ಯ ಯಡಿಯೂರಪ್ಪನವರ ಜೊತೆ ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ :

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 27ನೇ ಫೆಬ್ರುವರಿ, 1997ರಂದು ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತೇನೆ"

1) ಕರ್ನಾಟಕ ಧನ ವಿನಿಯೋಗ ವಿಧೇಯಕ, 1997